most of them are in Bangalore City. You conduct a socio-economic suvrey and try to include them in the backward classes.

SRI B. SHIVANNA:- For these reasons also I want time.

ರೇಷ್ಮೆ ಗೂಡುಗಳ ಬಗ್ಗೆ.

1695 ಶ್ರೀ. ಜಿ. ರಾಜುಗೌಡ (ಹನೂರು):- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1989-90 ರಲ್ಲಿ ಎಷ್ಟು ರೇಷ್ಮೆ ಗೂಡು ಮಾರುಕಟ್ಟೆಗಳಿಗೆ ಬಂದಿದೆ;

ಆ) ಇದರಲ್ಲಿ ಸರ್ಕಾರಿ ಫಿಲೇಚರುಗಳಿಗೆ ಕೊಂಡುಕೊಂಡ ಪ್ರಮಾಣವೆಷ್ಟು;

ಇ) ಉತ್ಪಾದನೆ ಆಗಿರುವ ರೇಷ್ಮೆ ನಟ್ಟಿ ಜೆಲ್ಲಿ ರೇಷ್ಮೆ ಎಷ್ಟು;

ಈ) ಮೇಲ್ಕಂಡ ವರ್ಷದಲ್ಲಿ ಎಲ್ಲಾ ಸರ್ಕಾರಿ ಫಿಲೇಚರುಗಳ ಲಾಭ, ನಷ್ಟ ಎಷ್ಟೆಷ್ಟು? (ಪ್ರತ್ಯೇಕ ವಿವರ ನೀಡುವುದು)

ಶ್ರೀ ಎಂ.ಎಸ್. ಆತ್ಮಾನಂದ (ರೇಷ್ಮೆ ಸಚಿವರು):-

ಅ) 48,978 ಮೆಟ್ರಿಕ್ ಟನ್ನುಗಳು.

ಆ) 560 ಮೆಟ್ರಿಕ್ ಟನ್ನುಗಳು.

ಇ) ರೇಷ್ಮೆ ನಟ್ಟಿ 13817 ಕೆ.ಜಿ
ಜೆಲ್ಲಿ ರೇಷ್ಮೆ 211 ಕೆ.ಜಿ.

ಈ) ಎಲ್ಲಾ ರೇಷ್ಮೆ ಕಾರ್ಖಾನೆಗಳು ನಷ್ಟದಲ್ಲಿ ನಡೆಯುತ್ತಿವೆ.

1989-90ನೇ ಸಾಲಿನ ನಷ್ಟದ ವಿವರಗಳು ಈ ರೀತಿ ಇದೆ.

ಫಿಲೇಚರು	ನಷ್ಟ (ಲಕ್ಷ ರೂ.ಗಳಲ್ಲಿ)
1. ಕೊಳ್ಳೇಗಾಲ	66.54
2. ಸಂತೇಮರಹಳ್ಳಿ	34.84
3. ಚಾಮರಾಜನಗರ	33.75
4. ಮಾಂಬಳ್ಳಿ	23.07
ಒಟ್ಟು	158.20

ಶ್ರೀ ಜಿ. ರಾಜುಗೌಡ:- ಸ್ವಾಮಿ ನಾನು ಸರ್ಕಾರಿ ಫಿಲೇಚರ್ಸ್ ಎಷ್ಟು ಎಂದು ಕೇಳಿದ್ದೆ. ಅವರು 4 ಎಂದು ಉತ್ತರ ಕೊಟ್ಟಿದ್ದಾರೆ. ಬಹುಶಃ ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಂದು ಟಿ. ನರಸೀಪುರ ಮತ್ತು ಕನಕಪುರದಲ್ಲಿರುವುದನ್ನು ಬಿಟ್ಟುಬಿಟ್ಟಿದ್ದಾರೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ 4 ಸರ್ಕಾರಿ ರೇಷ್ಮೆ ಕಾರ್ಖಾನೆಗಳಿಂದ ಸುಮಾರು 1 ಕೋಟಿ 58 ಲಕ್ಷ 20 ಸಾವಿರ ರೂಪಾಯಿಗಳ ನಷ್ಟ 1989ರಲ್ಲಿ ಆಗಿದೆ ಎಂದು ಹೇಳಿದ್ದಾರೆ. ಸ್ವಾಮಿ ಈಗ ಇರತಕ್ಕಂಥ ಕಾರ್ಖಾನೆಗಳನ್ನು ಮುಚ್ಚಿ ಆಲ್ಲಿ ಇರತಕ್ಕಂಥ ಎಲ್ಲಾ ವರ್ಕರ್ಸ್‌ಗೆ ವರ್ಷವಿಡೀ ಸಂಬಳ ಕೊಟ್ಟರೂ ಇದಕ್ಕಿಂತ ಕಡಿಮೆ ನಷ್ಟವಾಗುತ್ತದೆ. ಈ ನಷ್ಟವನ್ನು ತಗ್ಗಿಸಲು ತಾವು ಏನು ಮಾಡಿತ್ತೀರಿ? ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಇಲ್ಲಿ ಸರಿಯಾದ ಉತ್ತರ ನನಗೆ ಸಿಕ್ಕಿಲ್ಲ. ಏಕೆಂದರೆ 560 ಮೆಟ್ರಿಕ್ ಟನ್ ಗೂಡನ್ನು ಕರಗಿಸಿದಾಗ ರೇಷ್ಮೆ ನಟ್ಟಿ, ರೇಷ್ಮೆ ಜೆಲ್ಲಿ ಎಷ್ಟಾಗುತ್ತದೆಂದು ಕೇಳಿದ್ದೇನೆ. ಅದಕ್ಕೆ ಬಹುಶಃ ಸರಿಯಾದ ಉತ್ತರ ಬಂದಿಲ್ಲ. ಆದ್ದರಿಂದ ಈ ಪ್ರಶ್ನೆಯನ್ನು ತಾವು ದಯಮಾಡಿ ತಡೆಹಿಡಿದು ಸರಿಯಾದ ಉತ್ತರ ಕೊಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಆಯಿತು, ತಡೆಹಿಡಿದಿದ್ದೇನೆ. ಶ್ರೀ ನಾರಾಯಣ ಸ್ವಾಮಿ, ಶ್ರೀ ರೇವಣ್ಣ, ಶ್ರೀ ಲಕ್ಕಪ್ಪ ಅವರುಗಳು ಸಭೆಯಲ್ಲಿ ಇಲ್ಲ. ಈಗ ಶ್ರೀ ಸೋಮಸುಂದರರ ಅವರು 1360ನೇ ಪ್ರಶ್ನೆ ಕೇಳಬಹುದು.

ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕೈಗಾರಿಕೆಗಳಲ್ಲಿನ ನೇಮಕಾತಿ ಬಗ್ಗೆ.

1360 ಶ್ರೀ ಕೆ.ಎನ್. ಸೋಮಸುಂದರರ (ಕೃಷ್ಣರಾಜ):- ಮಾನ್ಯ ರೇಷ್ಮೆ ರಾಜ್ಯ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕೈಗಾರಿಕಾ ಘಟಕಗಳಲ್ಲಿ ಸರ್ಕಾರಿ ನಿಯಮದ ಪ್ರಕಾರ ಬಡ್ತಿ ನೀಡುವಲ್ಲಿ ರೋಸ್ಟರ್ ಪದ್ಧತಿ ಅನುಸರಿಸಲಾಗುತ್ತಿದೆಯೇ, ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು.

ಆ) ಈ ಘಟಕಗಳ ವೃಂದ ನೇಮಕಾತಿ ನಿಯಮಗಳು ಹಾಗೂ ಜೇಷ್ಠತಾ ಪಟ್ಟಿ ಯಾವಾಗಿನಿಂದ ಜಾರಿಯಲ್ಲಿದೆ. ಜಾರಿಗೊಳಿಸಿದ್ದರೆ ಬಡ್ತಿಯನ್ನು ಯಾವ ನಿಯಮದ ಪ್ರಕಾರ ನೀಡಲಾಗುತ್ತಿದೆ.

ಇ) ಇದರಲ್ಲಿ ಜನರಲ್ ಮ್ಯಾನೇಜರ್, ಫ್ಯಾಕ್ಟರಿ : ಮ್ಯಾನೇಜರ್, ಅಸಿಸ್ಟೆಂಟ್ ಫ್ಯಾಕ್ಟರಿ ಮ್ಯಾನೇಜರ್ ಹುದ್ದೆಗಳಲ್ಲಿರುವ ಪರಿಶಿಷ್ಟ ಜಾತಿ ನೌಕರರೆಷ್ಟು ಹಾಗೂ ಇತರರೆಷ್ಟು?

ಶ್ರೀ ಎಂ.ಎಸ್. ಆತ್ಮಾನಂದ (ರೇಷ್ಮೆ ಸಚಿವರು.):-

ಅ) ವೃಂದ ಮತ್ತು ನೇಮಕಾತಿ ನಿಯಮಗಳು ರೇಷ್ಮೆ ಕಾರ್ಖಾನೆಗಳಲ್ಲಿ ಜಾರಿಯಲ್ಲಿ ಇಲ್ಲದಿದ್ದರೂ ರೋಸ್ಟರ್ ಪದ್ಧತಿಯನ್ನು ಹಿಂದಿನಿಂದಲೂ ಅನುಸರಿಸಲಾಗಿದೆ.

ಆ) ಜಾರಿಯಲ್ಲಿಲ್ಲ.

ರೇಷ್ಮೆ ಕಾರ್ಖಾನೆಗಳಿಗೆ ಸಂಬಂಧಪಟ್ಟಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಯಾರಿಸಲಾಗುತ್ತಿದೆ. ಜೇಷ್ಠತಾ ಪಟ್ಟಿಯನ್ನು ಸಹ ತಯಾರಿಸಲಾಗುತ್ತಿದೆ. 1983ನೇ ಸಾಲಿನಿಂದ ಯಾವ ಬಡ್ತಿಯನ್ನು ನೀಡಿಲ್ಲ ಹಾಗೂ ಹಿಂದಿನ ಅಂತಹ ಬಡ್ತಿಯನ್ನು ಆಡಹಾಕ್ ಆಧಾರದ ಮೇಲೆ ನೀಡಲಾಗಿದೆ.

ಇ) ಈ ಹುದ್ದೆಗಳಲ್ಲಿ ಇರುವ ಒಟ್ಟು 13 ನೌಕರರ ಪೈಕಿ 5 ನೌಕರರು ಪರಿಶಿಷ್ಟ ಜನಾಂಗಕ್ಕೆ ಸೇರಿದವರಾಗಿರುತ್ತಾರೆ.

ಶ್ರೀ ಕೆ.ಎಸ್. ಸೋಮಸುಂದರರ:- ಮಾನ್ಯ ಅಧ್ಯಕ್ಷರೇ, ಸೀನಿಯಾರಿಟಿ ಲಿಸ್ಟ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ಯಾವಾಗ ಮಾಡುತ್ತೀರಿ?

ಶ್ರೀ ಎಂ.ಎಸ್. ಆತ್ಮಾನಂದ:- ಮಾನ್ಯ ಅಧ್ಯಕ್ಷರೇ, ನಾನು ಕಳೆದ ವಾರ ಇವರ ಪ್ರಶ್ನೆಗೆ ಉತ್ತರ ಕೊಟ್ಟಿರುವಂತೆ ದಿನಾಂಕ 11-7-90 ರಂದು ಈ ಒಂದು ಕೇಡರ್ ಆಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಸರ್ಕಾರದ ಒಪ್ಪಿಗೆಗೆ ಕಳುಹಿಸಿಕೊಡಲಾಗಿದೆ. ಸರ್ಕಾರದ ಮಂಜೂರಾತಿ ದೊರೆತ ಕೂಡಲೇ ಈ ಒಂದು ಕೇಡರ್ ಆಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ನ ಅನುಗುಣವಾಗಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಸೋಮಸುಂದರರ:- ನಿರ್ದೇಶಕರ ಹುದ್ದೆಯನ್ನು ಪರಿಶಿಷ್ಟ ಜಾತಿಯವರಿಗೆ ಕೊಡತಕ್ಕಂಥ ಆಲೋಚನೆ ಏನಾದರೂ ಇದೆಯೇ?

ಶ್ರೀ ಎಂ.ಎಸ್. ಆತ್ಮಾನಂದ:- ಅವರಿಗೆ ಅರ್ಹತೆ ಇದ್ದರೆ ಹಾಗೂ ನಮ್ಮ ಕಾನೂನಿನಲ್ಲಿ ಅವಕಾಶ ಇದ್ದರೆ ಕೊಡುತ್ತೇವೆ.